# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

# कर्नाटक-संस्कृत-विश्वविद्यालयः

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.


ಸಂಖ್ಯೆ: ಕಸಂವಿ/ಪ್ರ.ಸ./2017–18 ದಿನಾಂಕ: 19.03.2019

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ಐವತ್ತೊಂದನೆಯ** ಸಭೆಯು ದಿನಾಂಕ: **13.03.2019ರ ಬುಧವಾರ ಅಪರಾಹ್ನ 3.30ಕ್ಕೆ** ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

I/c ಕುಲಸಚಿವರು
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.

ಇವರಿಗೆ,

1. **ಶ್ರೀಮತಿ ಸುಜಾತ ಗೌಡ,** # 30, 7ನೇ ಹಂತ, 2ನೇ ಮುಖ್ಯರಸ್ತೆ ಬಿ.ಇ.ಎಂ.ಎಲ್. ಲೇಔಟ್, ಮೈಲಸಂದ್ರ, ಕೆಂಗೇರಿ, ಬೆಂಗಳೂರು – 560059.
2. **ಶ್ರೀ ಶಿವಕುಮಾರ್ ಎನ್.,** # 109, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಪಾಂಡುರಂಗ ಬಡಾವಣೆ, ಅರಕೆರೆ ಗೇಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076.
3. **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು–560001
4. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು–560001
5. **ಸರ್ಕಾರದ ಕಾರ್ಯದರ್ಶಿ,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001
6. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಪ್ರಸನ್ನಕುಮಾರ್ ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು–09,
7. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು–570001.
8. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
9. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001
10. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು–560001
11. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012
12. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009
13. **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

**ಪ್ರತಿಗಳು:**

1. **ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು,** ರಾಜಭವನ, ಬೆಂಗಳೂರು – 560001
2. **ಮಾನ್ಯ ಕುಲಪತಿಯವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ರಕ್ಷಾ ಪ್ರತಿ



Scanned by CamScanner

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## 13.03.2019ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 51ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 51ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಮಾರ್ಚ್ 13 ಬುಧವಾರ ಅಪರಾಹ್ನ 03.30** ಗಂಟೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀಮತಿ ಸುಜಾತ ಗೌಡ,** ಬೆಂಗಳೂರು | ಸದಸ್ಯರು |
| ೩. | **ಶ್ರೀ ಶಿವಕುಮಾರ್ ಎನ್.,** ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 | ಸದಸ್ಯರು |
| ೫. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| | – ಪರವಾಗಿ ಶ್ರೀಮತಿ ಕಾವ್ಯಶ್ರೀ ಎಂ, ಸಹಾಯಕ ನಿರ್ದೇಶಕರು | ಸದಸ್ಯರು |
| ೬. | **ಪ್ರೊ. ವಿ ಗಿರೀಶ್ ಚಂದ್ರ,** ಕುಲಸಚಿವರು, (ಪ್ರಭಾರ) | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಉಪ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೭. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೮. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೯. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

### 2019ರ ಮಾರ್ಚ್ 13ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 51ನೇ ಸಭೆಯ ನಡಾವಳಿ

| ವಿ.ಸಂ. | ವಿಷಯ, ಟಿಪ್ಪಣಿ ಮತ್ತು ನಿರ್ಣಯ |
|---|---|
| ವಿಷಯ 01 | **ಪ್ರಶಾಸನ ಸಮಿತಿ 49ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 49ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 08.01.2019ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಪ್ರಶಾಸನ ಸಮಿತಿ 49ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |
| ವಿಷಯ 02 | **'ಪ್ರಶಿಕ್ಷಣ ಪರಿಷತ್' 26ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ 26ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 13.03.2019ರಂದು ಬೆಳಿಗ್ಗೆ 11.30ಕ್ಕೆ ನಡೆಯಿತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **'ಪ್ರಶಿಕ್ಷಣ ಪರಿಷತ್' 26ನೇ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು** |



Scanned by CamScanner

| | |
|---|---|
| ವಿಷಯ 03 | ಅಧ್ಯಯನಾಂಗದ ನಿರ್ದೇಶಕರನ್ನು ನಿಯೋಜಿಸುವ ಬಗೆಗೆ.<br>ದಿನಾಂಕ: 28.05.2014ರಂದು ಅಧ್ಯಯನಾಂಗದ ನಿರ್ದೇಶಕರನ್ನಾಗಿ ಡಾ. ವೀರನಾರಾಯಣ ಪಾಂಡುರಂಗಿರವರನ್ನು ನಿಯೋಜಿಸಲಾಗಿತ್ತು. ಆದರೆ ಅವರು ಈ ಹುದ್ದೆಗೆ ರಾಜೀನಾಮೆ ನೀಡಿರುವ ಹಿನ್ನೆಲೆಯಲ್ಲಿ ಆ ಸ್ಥಾನಕ್ಕೆ ಬೇರೊಬ್ಬರನ್ನು ಮೂರು ವರ್ಷ ಅವಧಿಗೆ ಸೀಮಿತವಾಗಿ ನಿಯೋಜಿಸಬಹುದಾಗಿದ್ದು ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಡಾ. ಬಿ. ವಿ ವೆಂಕಟರಮಣ, ಸಹಪ್ರಾಧ್ಯಾಪಕರು – ಇವರನ್ನು ಮೂರು ವರ್ಷ ಅವಧಿಗೆ ಅಧ್ಯಯನಾಂಗದ ನಿರ್ದೇಶಕರನ್ನಾಗಿ ನೇಮಿಸಲು ಸಭೆಯು ತೀರ್ಮಾನಿಸಿತು.** |
| ವಿಷಯ 04 | ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗವನ್ನು ವಿಭಜಿಸುವುದರ ಬಗೆಗೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವಿಶ್ವವಿದ್ಯಾಲಯದ ಮತ್ತು ನಿರ್ದೇಶನಾಲಯದ ಪರೀಕ್ಷೆಗಳ ನಿರ್ವಹಣೆಗೆ ಪರೀಕ್ಷಾಂಗವು ಕಾರ್ಯನಿರ್ವಹಿಸುತ್ತಿದೆ. ಈ ಪರೀಕ್ಷಾಂಗದ ಕಾರ್ಯವ್ಯಾಪ್ತಿಯು ಅಧಿಕವಾಗಿರುವುದರಿಂದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಮತ್ತು ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ವಿಭಾಗವನ್ನು 2 ಭಾಗಗಳನ್ನಾಗಿ ವಿಭಜಿಸಬಹುದಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮತ್ತು ಅಧಿಕಾರಿಗಳನ್ನು ನೇಮಿಸುವ ಅಗತ್ಯಕ್ಕಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗವನ್ನು ವಿಭಜಿಸಲು ಸಭೆಯು ಒಪ್ಪಿತು. ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾಧಿಕಾರಿ ಆಗಿ ಡಾ.ಮಲ್ಲನ ಗೌಡ, ಸಹಾಯಕ ನಿರ್ದೇಶಕರು– ಇವರನ್ನು ಮತ್ತು ವಿಶ್ವವಿದ್ಯಾಲಯದ ಹಾಗೂ ಸಂಯೋಜಿತ ಕಾಲೇಜುಗಳ ಪರೀಕ್ಷೆಗೆ ಸಂಬಂಧಿಸಿದಂತೆ ಡಾ. ರಾಮಕೃಷ್ಣ ಭಟ್, ಸಹಾಯಕ ಪ್ರಾಧ್ಯಾಪಕರು – ಇವರನ್ನು ನಿಯೋಜಿಸಲು ಸಭೆಯು ತೀರ್ಮಾನಿಸಿತು. ಆದರೆ ಡಾ. ರಾಮಕೃಷ್ಣ ಭಟ್ ಮತ್ತು ಡಾ.ಮಲ್ಲನ ಗೌಡರವರ ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗದ ಕಾರಣ ಇವರ ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗುವವರೆಗೆ ಹಾಲಿ ಪರೀಕ್ಷಾ ನಿಯಂತ್ರಕರಾದ ಡಾ. ಬಿ ವಿ ವೆಂಕಟರಮಣರವರನ್ನು ಮುಂದುವರೆಸಲು ಸಭೆಯು ಒಪ್ಪಿತು.** |
| ವಿಷಯ 05 | ಚಾಮರಾಜಪೇಟೆಯಲ್ಲಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಸ್ತಿಯನ್ನು ಸುಪರ್ದಿಗೆ ಪಡೆಯುವ ಬಗೆಗೆ.<br>ಶ್ರೀ ಚಾಮರಾಜೇಂದ್ರ ಒಡೆಯರ್‌ರವರು ಸಂಸ್ಕೃತ ವಿದ್ಯಾರ್ಥಿಗಳಿಗಾಗಿ ಕೊಡಮಾಡಿದ್ದ ಚಾಮರಾಜಪೇಟೆಯ ಸರ್ವೆ ನಂಬರ್ 263ರಲ್ಲಿರುವ ಆಸ್ತಿಯನ್ನು ವಿಶ್ವವಿದ್ಯಾಲಯದ ಸುಪರ್ದಿಗೆ ಪಡೆಯಬೇಕಿರುತ್ತದೆ. ಈ ಸಂಬಂಧ ಉಚ್ಚ ನ್ಯಾಯಾಲಯದಲ್ಲಿ ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸುತ್ತಿರುವ ವಕೀಲರನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರವಾಗಿ ವಾದಿಸಲು ನೇಮಕ ಮಾಡಿಕೊಳ್ಳಬಹುದಾಗಿದೆ. ಈ ನ್ಯಾಯವಾದಿಗಳಿಗೆ ವಿಶ್ವವಿದ್ಯಾಲಯದ ನಿಯಮಾನುಸಾರ ಭತ್ಯೆ ನೀಡಬೇಕಾಗಿದ್ದು ಈ ವಿಷಯವನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಚಾಮರಾಜಪೇಟೆಯಲ್ಲಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಸ್ತಿಯನ್ನು ಸುಪರ್ದಿಗೆ ಪಡೆಯುವ ಸಂಬಂಧ Hegade Prakash R, # 102, 8th main road,HMT Layout, R.T Nagar, Banglore- 560 032 ಈ ವಕೀಲರನ್ನು ನಿಯಮಿಸಿಕೊಳ್ಳಲು ಸಭೆಯು ಅನುಮತಿ ನೀಡಿತು.** |
| ವಿಷಯ 06 | ವಕೀಲರನ್ನು ಬದಲಾಯಿಸುವ ಬಗೆಗೆ.<br>ವಿಶ್ವವಿದ್ಯಾಲಯದಲ್ಲಿ 2011–12ನೇ ಸಾಲಿನಿಂದ ನಡೆದ ನೇಮಕಾತಿಯನ್ನು ಪ್ರಶ್ನಿಸಿ ಕೆಲವರು ವಿಶ್ವವಿದ್ಯಾಲಯದ ಮೇಲೆ ಕೇಸು ದಾಖಲಿಸಿದ್ದರು. ಈ ವಿಷಯವಾಗಿ ವಿಶ್ವವಿದ್ಯಾಲಯದ ಪರವಾಗಿ ವಾದಿಸಲು ಹಿರಿಯ ನ್ಯಾಯಮೂರ್ತಿಗಳಾದ ಶ್ರೀ ಸುಬ್ರಹ್ಮಣ್ಯ ಜೋಯಿಸ್, ಹಿರಿಯ ನ್ಯಾಯವಾದಿಗಳು – ಇವರನ್ನು ನೇಮಿಸಲಾಗಿತ್ತು. ಆದರೆ ಇವರು ವಯೋಸಹಜ ದೌರ್ಬಲ್ಯದಿಂದಾಗಿ ತಮ್ಮ ಪ್ರಾಕ್ಟೀಸ್‌ನ್ನು ಸ್ಥಗಿತಗೊಳಿಸಿದ್ದಾರೆ. ಆದ್ದರಿಂದ ಈ ಕೇಸನ್ನು ಬೇರೊಬ್ಬ ನ್ಯಾಯವಾದಿಗಳಿಗೆ ವರ್ಗಾಯಿಸಲು ಮತ್ತು ನಿಯಮಾನುಸಾರ ಭತ್ಯೆ ನೀಡಲು ಅನುಮತಿ ಕೋರಿ ಪ್ರಶಾಸನ ಸಮಿತಿಯಲ್ಲಿ ಮಂಡಿಸಿದೆ. |
| ನಿರ್ಣಯ | **ಶ್ರೀ ಸುಬ್ರಹ್ಮಣ್ಯ ಜೋಯಿಸ್, ಹಿರಿಯ ನ್ಯಾಯವಾದಿಗಳು ಇವರ ಬದಲಾಗಿ Abhinav Ramanand, Kumar & Kumar Advocates ಇವರಿಗೆ ಮೊಕದ್ದಮೆಗಳನ್ನು ಹಸ್ತಾಂತರಿಸಲು ಸಭೆಯು ಒಪ್ಪಿದೆ.** |



Scanned by CamScanner

| | |
|---|---|
| ವಿಷಯ 07 | **ರೇವಣ್ಣ ಎಸ್. ಬಿ ಇವರನ್ನು ವಿಶ್ವವಿದ್ಯಾಲಯಕ್ಕೆ ಮರುನಿಯೋಜನೆ ಮಾಡಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ "ಡಿ" ಗ್ರೂಪ್ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದ ರೇವಣ್ಣ ಎಸ್.ಬಿ ರವರನ್ನು ದಿನಾಂಕ: 07.05.2018ರಂದು ಮೇಲುಕೋಟೆಯ ಸಂಶೋಧನಾ ಸಂಸತ್‌ಗೆ ನಿಯೋಜನೆ ಮಾಡಲಾಗಿತ್ತು. ದಿನಾಂಕ: 07.02.2019ರಂದು ಇವರ ನಿಯೋಜನೆ ರದ್ದುಗೊಳಿಸಿ ಮಾತೃಸಂಸ್ಥೆಯಲ್ಲಿ ಕಾರ್ಯನಿರ್ವಹಿಸಲು ಆದೇಶ ನೀಡಲಾಗಿದೆ. ಇದಕ್ಕೆ ಘಟನೋತ್ತರ ಅನುಮತಿ ಕೋರಿ ಪ್ರಶಾಸನ ಸಮಿತಿಯಲ್ಲಿ ಮಂಡಿಸಿದೆ. |
| ನಿರ್ಣಯ | **ರೇವಣ್ಣ ಎಸ್. ಬಿ ಇವರನ್ನು ವಿಶ್ವವಿದ್ಯಾಲಯಕ್ಕೆ ಮರುನಿಯೋಜನೆ ಮಾಡಿರುವುದಕ್ಕೆ ಸಭೆಯು ಘಟನೋತ್ತರ ಅನುಮತಿ ನೀಡಿದೆ.** |
| ವಿಷಯ 08 | **CAS Statute ನ್ನು ಅಳವಡಿಸಿಕೊಳ್ಳಲು ಅನುಮತಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ CAS Statute ನ್ನು ದಿನಾಂಕ: 10.09.2018ರಂದು ಮಾನ್ಯ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಮಾನ್ಯ ಕುಲಾಧಿಪತಿಗಳು ದಿನಾಂಕ: 31.01.2019ರಂದು ಈ ಪರಿನಿಯಮವನ್ನು ಅನುಮೋದಿಸಿರುವ ಹಿನ್ನೆಲೆಯಲ್ಲಿ ಸಹಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರನ್ನು ಆಯಾಯ ಹುದ್ದೆಗಳಿಗೆ ಪದೋನ್ನತಿ ನೀಡಬೇಕಾಗಿದೆ. ಈ ಸಂಬಂಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಪ್ರಶಾಸನ ಸಮಿತಿ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **CAS Statute ನ್ನು ಅಳವಡಿಸಿಕೊಳ್ಳಲು ಸಭೆಯು ಅನುಮತಿ ನೀಡಿತು. ಈ ಸಂಬಂಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆ ಸೂಚಿಸಿತು.** |
| ವಿಷಯ 09 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸಿದ 2018-19ನೇ ಸಾಲಿನ ವಲಯಮಟ್ಟ ಮತ್ತು ರಾಜ್ಯಮಟ್ಟದ ಸ್ಪರ್ಧೆಗಳ ಒಟ್ಟು ವೆಚ್ಚಕ್ಕೆ ಅನುಮತಿ ನೀಡುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ರಾಜ್ಯದ ಸಂಸ್ಕೃತ ಪಾಠಶಾಲೆಗಳಲ್ಲಿ 2018-19ನೇ ಸಾಲಿನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ವಲಯಮಟ್ಟದ ಸ್ಪರ್ಧೆಗಳನ್ನು ಹಾಗೂ ವಲಯಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಿತು. ಈ ಸ್ಪರ್ಧೆಗಳನ್ನು ನಡೆಸಲು 3,50,000/- ರೂಪಾಯಿಗಳ ಅಂದಾಜು ವೆಚ್ಚಕ್ಕೆ ದಿನಾಂಕ: 27.10.2018ರಂದು ನಡೆದ ಪ್ರಶಾಸನ ಸಮಿತಿ 48ನೇ ಸಭೆಯ ಅನುಮೋದನೆಯನ್ನು ಪಡೆಯಲಾಗಿತ್ತು. ಈ ಮೊತ್ತದಲ್ಲಿ ರೂ. 2.50/-ಲಕ್ಷಗಳನ್ನು ಮಾತ್ರ ಪಡೆಯಲಾಗಿತ್ತು. ವಲಯ ಹಾಗೂ ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಲು ಒಟ್ಟಾರೆಯಾಗಿ ರೂ. 1,99,632/-(ಒಂದು ಲಕ್ಷದ ತೊಂಭತ್ತೊಂಬತ್ತು ಸಾವಿರದ ಆರುನೂರ ಮೂವತ್ತೆರಡು ರೂಪಾಯಿಗಳು ಮಾತ್ರ.) ಖರ್ಚಾಗಿದ್ದು, ಉಳಿಕೆ ಹಣ ರೂ. 50,368/-ಗಳನ್ನು ಹಣಕಾಸು ಅಧಿಕಾರಿಗಳ ಖಾತೆಗೆ ಜಮಾ ಮಾಡಲಾಗಿದೆ. ಆದ್ದರಿಂದ ಕಡತ ಮುಕ್ತಾಯಕ್ಕೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸಿದ 2018-19ನೇ ಸಾಲಿನ ವಲಯಮಟ್ಟ ಮತ್ತು ರಾಜ್ಯಮಟ್ಟದ ಸ್ಪರ್ಧೆಗಳ ಒಟ್ಟು ವೆಚ್ಚ 1,99,632/-ಕ್ಕೆ ಮತ್ತು ಕಡತ ಮುಕ್ತಾಯಗೊಳಿಸಲು ಸಭೆ ಅನುಮತಿ ನೀಡಿತು.** |
| ವಿಷಯ 10 | **ರಾಷ್ಟ್ರ ಮಟ್ಟದ "ನ್ಯಾಯಸಿದ್ಧಾಂತಮುಕ್ತಾವಲೀ" ಕಾರ್ಯಶಾಲೆ ಏರ್ಪಡಿಸುವ ಬಗೆಗೆ.**<br>"ನ್ಯಾಯಸಿದ್ಧಾಂತಮುಕ್ತಾವಲೀ" ಎಂಬ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥವು ಎಲ್ಲಾ ಶಾಸ್ತ್ರಗಳ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ಗ್ರಂಥವಾಗಿರುತ್ತದೆ. ಈ ಸಂಪೂರ್ಣ ಗ್ರಂಥದ ಕುರಿತಾಗಿ 2019ರ ಮೇ ತಿಂಗಳಿನ ಎರಡನೆಯ ಅಥವಾ ಕೊನೆಯ ವಾರದಲ್ಲಿ ರಾಷ್ಟ್ರಮಟ್ಟದ 10 ದಿನಗಳ ಕಾರ್ಯಶಾಲೆ ಏರ್ಪಡಿಸಲು ವಿಶ್ವವಿದ್ಯಾಲಯದ ಯೋಜನಾ ಸಹಾಯಕರು ಸಿದ್ಧರಾಗಿರುತ್ತಾರೆ. ಈ ಕಾರ್ಯಶಾಲೆಗೆ 1.00 ಲಕ್ಷ ರೂಗಳನ್ನು ಅಂದಾಜಿಸಲಾಗಿದ್ದು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **1.00 ಲಕ್ಷರೂ. ವೆಚ್ಚದಲ್ಲಿ ರಾಷ್ಟ್ರ ಮಟ್ಟದ "ನ್ಯಾಯಸಿದ್ಧಾಂತಮುಕ್ತಾವಲೀ" ಕಾರ್ಯಶಾಲೆಯನ್ನು ಏರ್ಪಡಿಸಲು ಸಭೆಯು ಒಪ್ಪಿಗೆ ನೀಡಿತು.** |
| ವಿಷಯ 11 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತವನ್ನು ಪರಿಷ್ಕರಿಸುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತವನ್ನು ಹೆಚ್ಚಿಸಬೇಕಿದ್ದು, ಸದರಿ ವಿವರಗಳು ಈ ಕೆಳಕಂಡಂತಿವೆ. ಈ ದರವನ್ನು ಸದರಿ ನಡೆಯುತ್ತಿರುವ ಮೌಲ್ಯಮಾಪನ ಕಾರ್ಯದಿಂದಲೇ ಅನ್ವಯಿಸುವಂತೆ ಅನುಮತಿ ಕೋರಿದೆ. |



Scanned by CamScanner

| ಕ್ರ.ಸಂ | ವಿಷಯ | ಪರೀಕ್ಷಾ ಶುಲ್ಕ | |
|---|---|---|---|
| | | ಪ್ರಸ್ತುತ (ರೂ) | ಪರಿಷ್ಕೃತ (ರೂ) |
| 1 | ಪ್ರಥಮ ತರಗತಿ ಮೌಲ್ಯಮಾಪನ ಸಂಭಾವನೆ | 4.00 (ಒಂದು ಪತ್ರಿಕೆಗೆ) | 5.00 (ಒಂದು ಪತ್ರಿಕೆಗೆ) |
| 2 | ಕಾವ್ಯ ತರಗತಿ ಮೌಲ್ಯಮಾಪನ ಸಂಭಾವನೆ | 6.00 (ಒಂದು ಪತ್ರಿಕೆಗೆ) | 7.00 (ಒಂದು ಪತ್ರಿಕೆಗೆ) |
| 3 | ಸಾಹಿತ್ಯ ತರಗತಿ ಮೌಲ್ಯಮಾಪನ ಸಂಭಾವನೆ | 9.00 (ಒಂದು ಪತ್ರಿಕೆಗೆ) | 10.00 (ಒಂದು ಪತ್ರಿಕೆಗೆ) |
| 4 | ಮುಖ್ಯ ಅಧೀಕ್ಷಕರ ಸಂಭಾವನೆ | 3000.00 | 3500.00 |
| 5 | ಉಪ ಮುಖ್ಯ ಅಧೀಕ್ಷಕರ ಸಂಭಾವನೆ (ಡಿ.ಸಿ.ಗಳಿಗೆ) | 2750.00 | 3000.00 |

**ನಿರ್ಣಯ**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತಗಳ ಪರಿಷ್ಕಾರಕ್ಕೆ ಸಭೆಯು ಒಪ್ಪಿಗೆ ಸೂಚಿಸಿದೆ.

**ವಿಷಯ 12**

ವಿದ್ಯಾವಾರಿಧಿ (ಪಿ.ಹೆಚ್.ಡಿ) ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತ ಪರಿಷ್ಕರಿಸುವ ಬಗೆಗೆ.

ವಿದ್ಯಾವಾರಿಧಿ (ಪಿ.ಹೆಚ್.ಡಿ) ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತವನ್ನು ಹೆಚ್ಚಿಸಬೇಕಿದ್ದು, ಸದರಿ ವಿವರಗಳು ಈ ಕೆಳಕಂಡಂತಿವೆ. ಈ ದರವನ್ನು ಸದರಿ ನಡೆಯುತ್ತಿರುವ ಮೌಲ್ಯಮಾಪನ ಕಾರ್ಯದಿಂದಲೇ ಅನ್ವಯಿಸುವಂತೆ ಅನುಮತಿ ಕೋರಿದೆ.

| ಕ್ರ.ಸಂ | ವಿಷಯ | ಪರೀಕ್ಷಾ ಶುಲ್ಕ | |
|---|---|---|---|
| | | ಪ್ರಸ್ತುತ | ಪರಿಷ್ಕೃತ (ರೂ) |
| 1 | ಪ್ರಶ್ನೆಪತ್ರಿಕೆ ತಯಾರಿಕೆ ಸಂಭಾವನೆ/ಗೌರವಧನ | – | **400.00** |
| 2 | ಮೌಲ್ಯಮಾಪನ ಸಂಭಾವನೆ/ಗೌರವಧನ) | – | **ಪ್ರತಿ ಪತ್ರಿಕೆಗೆ ರೂ.50.00 (ಕನಿಷ್ಠ 300.00)** |
| 3 | **Pre-Submission Colloquium** ಗೆ ಆಗಮಿಸುವ ಬಾಹ್ಯ ಪರೀಕ್ಷಕರ ಸಂಭಾವನೆ | – | **1000.00** ಹಾಗೂ ನಿಯಮಾನುಸಾರ ಪ್ರಯಾಣ ಭತ್ಯೆ & ಇತರೆ ಭತ್ಯೆಗಳನ್ನು ನೀಡಲಾಗುತ್ತದೆ. |

**ನಿರ್ಣಯ**

ವಿದ್ಯಾವಾರಿಧಿ (ಪಿ.ಹೆಚ್.ಡಿ) ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತ ಪರಿಷ್ಕರಿಸಿದ್ದಕ್ಕೆ ಸಭೆಯು ಒಪ್ಪಿಗೆ ಸೂಚಿಸಿತು.

**ವಿಷಯ 13**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸುವ ಬಗೆಗೆ.

ಎಲ್ಲಾ ಪರೀಕ್ಷೆಗಳ ಪರೀಕ್ಷಾ ಶುಲ್ಕದಿಂದ ಬರುವಂತಹ ಮೊತ್ತವು ಪರೀಕ್ಷಾಂಗದ ಖರ್ಚು ವೆಚ್ಚಕ್ಕೆ ಸಾಕಾಗುತ್ತಿಲ್ಲ. ಆದ ಕಾರಣ ಸ್ವಲ್ಪ ಮಟ್ಟದಲ್ಲಿ ಪರೀಕ್ಷಾ ಶುಲ್ಕವನ್ನು ಹೆಚ್ಚಿಸಲು ಅನುಮತಿ ಕೋರಿದೆ. SC/ST & CAT-I ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶ ಸಂಖ್ಯೆ :– ಇಡಿ 295 ಯುಎನ್ಇ 2018, ದಿ:–23/01/2019 ರಂತೆ ತೀರ್ಮಾನಿಸಲು ಕೋರಿದೆ. ಹೆಚ್ಚಿಸಬಹುದಾದ ಶುಲ್ಕದ ವಿವರವು ಈ ಕೆಳಕಂಡಂತಿವೆ.

| ವಿಷಯಗಳು | ಪರೀಕ್ಷಾ ಶುಲ್ಕ | | ಅಂಕಪಟ್ಟಿ ಶುಲ್ಕ | | ಒಟ್ಟು ಶುಲ್ಕ | |
|---|---|---|---|---|---|---|
| | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ |
| ಸಂಸ್ಕೃತ ಪ್ರಥಮಾ, ವೇದ ಪ್ರಥಮಾ, | 70.00 | 80.00 | 20.00 | 30.00 | 90.00 | 110.00 |
| ಸಂಸ್ಕೃತ ಕಾವ್ಯ, ವೇದ ಪ್ರವೇಶ, | 130.00 | 140.00 | 20.00 | 30.00 | 150.00 | 170.00 |
| ಸಂಸ್ಕೃತ ಸಾಹಿತ್ಯ, ವೇದ ಮೂಲ, | 190.00 | 200.00 | 20.00 | 30.00 | 210.00 | 230.00 |

**ನಿರ್ಣಯ**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಣೆಗೆ ಸಭೆಯು ಒಪ್ಪಿಗೆ ಸೂಚಿಸಿತು.

**ವಿಷಯ 14**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ, ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸುವ ಬಗೆಗೆ.

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ, ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಹೆಚ್ಚಿಸಬೇಕಿದ್ದು, ಸದರಿ ವಿವರಗಳು ಈ ಕೆಳಕಂಡಂತಿವೆ.

| ಪರೀಕ್ಷೆಗಳು | ನೋಂದಣಿ ಶುಲ್ಕ | ಪರೀಕ್ಷಾ ಶುಲ್ಕ | | ಅಂಕಪಟ್ಟಿ ಶುಲ್ಕ | | ಒಟ್ಟು ಶುಲ್ಕ | |
|---|---|---|---|---|---|---|---|
| | | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ |



Scanned by CamScanner

| | | | | | | | |
|---|---|---|---|---|---|---|---|
| ಸಂಸ್ಕೃತ ಪ್ರಥಮಾ, ವೇದ ಪ್ರಥಮಾ | 100.00 | 70.00 | 100.00 | 20.00 | 40.00 | 190.00 | 240.00 |
| ಸಂಸ್ಕೃತ ಕಾವ್ಯ, ವೇದ ಪ್ರವೇಶ, | 200.00 | 130.00 | 160.00 | 20.00 | 40.00 | 350.00 | 400.00 |
| ಸಂಸ್ಕೃತ ಸಾಹಿತ್ಯ, ವೇದ ಮೂಲ, | 300.00 | 190.00 | 220.00 | 20.00 | 40.00 | 510.00 | 560.00 |

**ನಿರ್ಣಯ**

**ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ, ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸಲು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ 50% ವಿನಾಯಿತಿ ನೀಡಲು ಸಭೆಯು ಒಪ್ಪಿತು.**

**ವಿಷಯ 15**

**ಸಂಸ್ಕೃತ ವಿಶ್ವವಿದ್ಯಾಲಯದ ಬಿ.ಎ ಶಾಸ್ತ್ರೀ & ಎಂ.ಎ.ಆಚಾರ್ಯ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸುವ ಬಗೆಗೆ.**

ಸಂಸ್ಕೃತ ವಿಶ್ವವಿದ್ಯಾಲಯದ ಬಿ.ಎ ಶಾಸ್ತ್ರೀ & ಎಂ.ಎ.ಆಚಾರ್ಯ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಹೆಚ್ಚಿಸಬಹುದಾಗಿದ್ದು ವಿವರಗಳು ಈ ಕೆಳಕಂಡಂತಿವೆ.

| ಪರೀಕ್ಷೆಗಳು | ಅರ್ಜಿ ಶುಲ್ಕ | | ಪರೀಕ್ಷಾ ಶುಲ್ಕ | | ಅಂಕಪಟ್ಟಿ ಶುಲ್ಕ | | ಒಟ್ಟು ಶುಲ್ಕ | |
|---|---|---|---|---|---|---|---|---|
| | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ |
| ಬಿ.ಎ ಶಾಸ್ತ್ರೀ | 10.00 | 20.00 | 320.00 | 350.00 | 20.00 | 30.00 | 350.00 | 400.00 |
| ಎಂ.ಎ., ಆಚಾರ್ಯ | 10.00 | 20.00 | 470.00 | 550.00 | 20.00 | 30.00 | 500.00 | 600.00 |

**ನಿರ್ಣಯ**

**ಸಂಸ್ಕೃತ ವಿಶ್ವವಿದ್ಯಾಲಯದ ಬಿ.ಎ ಶಾಸ್ತ್ರೀ & ಎಂ.ಎ.ಆಚಾರ್ಯ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸಲು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ 50% ವಿನಾಯಿತಿ ನೀಡಲು ಸಭೆಯು ಅನುಮೋದಿಸಿತು.**

**ವಿಷಯ 16**

**ವಿದ್ಯಾವಾರಿಧಿ (ಪಿಹೆಚ್.ಡಿ) ಪರೀಕ್ಷೆಯ ಪರೀಕ್ಷಾ ಶುಲ್ಕವನ್ನು ಪರಿಷ್ಕರಿಸುವ ಬಗೆಗೆ.**

ಸಂಸ್ಕೃತ ವಿಶ್ವವಿದ್ಯಾಲಯದ ವಿದ್ಯಾವಾರಿಧಿ (ಪಿಹೆಚ್.ಡಿ) ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕವನ್ನು ಹೆಚ್ಚಿಸಬಹುದಾಗಿದ್ದು ವಿವರಗಳು ಈ ಕೆಳಕಂಡಂತಿವೆ. ವಿದೇಶಿ ವಿದ್ಯಾರ್ಥಿಗಳಿಗೆ ದುಪ್ಪಟ್ಟು ಶುಲ್ಕವನ್ನು ವಿಧಿಸಬಹುದಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ 50% ವಿನಾಯಿತಿ ನೀಡಬಹುದಾಗಿದೆ.

| ಕ್ರ.ಸಂ | ವಿಷಯ | ಪರೀಕ್ಷಾ ಶುಲ್ಕ | |
|---|---|---|---|
| | | ಪ್ರಸ್ತುತ | ಪರಿಷ್ಕೃತ |
| 1 | ಅರ್ಜಿ ಶುಲ್ಕ | 500.00 | 500.00 |
| 2 | ಪ್ರವೇಶ ಪರೀಕ್ಷೆ ಶುಲ್ಕ | 300.00 | 1000.00 |
| 3 | ತಾತ್ಕಾಲಿಕ ನೋಂದಣಿ ಶುಲ್ಕ | 5000.00 | 2000.00 |
| 4 | ಕೋರ್ಸ್‌ವರ್ಕ್ ಶುಲ್ಕ | 3000.00 | 2000.00 |
| 4 | ಕೋರ್ಸ್‌ವರ್ಕ್ ಪರೀಕ್ಷಾ ಶುಲ್ಕ | 1000.00 | 1000.00 |
| 5 | ಕೋರ್ಸ್‌ವರ್ಕ್ ಮರುಮೌಲ್ಯಮಾಪನ ಶುಲ್ಕ (ಪ್ರತಿ ಪತ್ರಿಕೆಗೆ) | 1000.00 | 1000.00 |
| 6 | ವಾರ್ಷಿಕ ಬೋಧನಾ ಶುಲ್ಕ | 5000.00 | 6500.00 |
| 7 | ವಾರ್ಷಿಕ ಗ್ರಂಥಾಲಯ ಶುಲ್ಕ | 500.00 | 500.00 |
| 8 | ಪ್ರಬಂಧ ಸಲ್ಲಿಕೆ ಹಾಗೂ ಪರೀಕ್ಷಾ ಶುಲ್ಕ | 8000.00 | 10000.00 |
| 9 | ಘಟಿಕೋತ್ಸವದ ಶುಲ್ಕ (ಪ್ರಮಾಣ ಪತ್ರ – ಸಂಸ್ಕೃತ &ಆಂಗ್ಲ) | 1000.00 | 1000.00 |
| 10 | ಪ್ರಬಂಧ ಪ್ರಕಟಣೆ ಅನುಮತಿ ಶುಲ್ಕ | 2500.00 | 3500.00 |
| 11 | ಪುನರ್ ನೋಂದಣಿ ಶುಲ್ಕ | – | 20000.00 |

**ನಿರ್ಣಯ**

**ಮೇಲ್ಕಂಡ ಶುಲ್ಕ ಪರಿಷ್ಕರಣೆಗೆ ಸಭೆಯು ಒಪ್ಪಿಗೆ ಸೂಚಿಸಿತು.**

**ವಿಷಯ 17**

**ಶ್ರೀ ಉದ್ದಾನೇಶ್ವರ ವೇದ–ಸಂಸ್ಕೃತಪಾಠಶಾಲೆ, ಶ್ರೀ ಸಿದ್ಧಗಂಗಾಮಠ ಹಾಗೂ ಶ್ರೀ ಶಿವಕುಮಾರಸ್ವಾಮೀಜಿ ವೇದ–ಸಂಸ್ಕೃತ ಪಾಠಶಾಲೆ, ಶ್ರೀ ಸಿದ್ಧಗಂಗಾಮಠ ಈ ಸಂಸ್ಕೃತ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹೆಚ್ಚುವರಿ ಶಿಕ್ಷಕರ ಹುದ್ದೆಗಳನ್ನು ಸೃಜಿಸಿ, ವೇತನಾನುದಾನಕ್ಕೊಳಪಡಿಸಿಕೊಡುವ ಬಗ್ಗೆ.**

ಮೇಲಿನ ಎರಡೂ ಪಾಠಶಾಲೆಗಳ 103 ವಿಭಾಗಗಳಿಂದ 5550 ವಿದ್ಯಾರ್ಥಿಗಳು 2018–19 ಸಾಲಿನಲ್ಲಿ ಸಂಸ್ಕೃತವನ್ನು ಅಧ್ಯಯನ ಮಾಡುತ್ತಿದ್ದಾರೆ. ಸಂಸ್ಕೃತ ಪ್ರಥಮಾ ಮತ್ತು ಸಂಸ್ಕೃತ ಕಾವ್ಯ ತರಗತಿಗಳ ಪ್ರತಿ ವಿಭಾಗಗಳಲ್ಲಿ ಕನಿಷ್ಠ 40 ರಿಂದ ಗರಿಷ್ಠ 90 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಇಂದಿನ ಬೋಧನಾ ಪಠ್ಯಕ್ರಮದಲ್ಲಿ 90 ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದು ತುಂಬಾ ಕಷ್ಟಕರವಾಗಿದೆ. ಪ್ರಯುಕ್ತ "ಸಂಸ್ಕೃತ ಅನುದಾನ ಸಂಹಿತೆ" 5550 ವಿದ್ಯಾರ್ಥಿಗಳಿಗೆ 203 ಮಂದಿ ಶಿಕ್ಷಕರ ಅವಶ್ಯಕತೆ ಇರುತ್ತದೆ. ಎರಡೂ ಪಾಠಶಾಲೆಗಳಿಂದ ಅನುದಾನಸಹಿತವಾಗಿ ನಡೆಯುತ್ತಿರುವ 103 ವಿಭಾಗಗಳಲ್ಲಿ 69 ಶಿಕ್ಷಕರು ಬೋಧನಾಕಾರ್ಯ



Scanned by CamScanner

| | |
|---|---|
| | ನಿರ್ವಹಿಸುತ್ತಿದ್ದಾರೆ.<br>ಸರ್ಕಾರದಿಂದ 69 ಮಂದಿ ಶಿಕ್ಷಕರಿಗೆ ಅನುದಾನ ದೊರೆಯುತ್ತಿದ್ದು, 5550 ವಿದ್ಯಾರ್ಥಿಗಳಿಗೆ 203 ಶಿಕ್ಷಕರ ಅವಶ್ಯಕತೆ ಇರುತ್ತದೆ. ಅನುದಾನಿತವಾಗಿ ಕಾರ್ಯನಿರ್ವಹಿಸುತ್ತಿರುವ 69 ಶಿಕ್ಷಕರನ್ನು ಬಿಟ್ಟು ಉಳಿಕೆ 134 ಶಿಕ್ಷಕ ಹುದ್ದೆಗಳು ಸೃಜನೆಯಾಗಬೇಕಾಗಿರುತ್ತದೆ. 134 ಸಂಸ್ಕೃತ ಸಹಶಿಕ್ಷಕರ ಅವಶ್ಯವಿದ್ದಾಗ್ಯೂ ಕನಿಷ್ಟ 34 ಸಹಶಿಕ್ಷಕ ಹುದ್ದೆಗಳನ್ನು ಸೃಜಿಸಿ ಅನುದಾನಸಹಿತವಾಗಿ ಮಂಜೂರು ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪ್ರಶಾಸನ ಸಮಿತಿಯ ಒಪ್ಪಿಗೆಗಾಗಿ ಮಂಡಿಸಿದೆ. |
| ನಿರ್ಣಯ | **ಹೆಚ್ಚುವರಿ ಶಿಕ್ಷಕರ ಹುದ್ದೆಗಳನ್ನು ಸೃಜಿಸುವ ಸಂಬಂಧ ತ್ರಿಸದಸ್ಯ ಸಮಿತಿಯ ವರದಿಯನ್ನು ಪಡೆದು ಅನಂತರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮತಿ ಪಡೆಯಲು ಸಭೆಯು ಸೂಚಿಸಿತು.** |
| ವಿಷಯ 18 | **ಸ್ನಾತಕಪೂರ್ವ ದೀಕ್ಷಾಂತ ಘಟಿಕೋತ್ಸವಕ್ಕೆ ಖರ್ಚಾದ ಮೊತ್ತಕ್ಕೆ ಅನುಮತಿ ಪಡೆಯುವ ಬಗೆಗೆ.**<br>ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 16.11.2018ರಂದು ನಡೆದ ಸ್ನಾತಕ ಪೂರ್ವ ದೀಕ್ಷಾಂತ ಸಮಾರಂಭದ ಕಾರ್ಯಕ್ರಮಕ್ಕೆ 2.50ಲಕ್ಷ ಅಂದಾಜಿಸಲಾಗಿತ್ತು. 2,30,783 ರೂಗಳು ಖರ್ಚಾಗಿದ್ದು ಉಳಿಕೆ ಮೊತ್ತವನ್ನು ಮಾನ್ಯ ಹಣಕಾಸು ಅಧಿಕಾರಿಗಳ ಖಾತೆಗೆ ಜಮಾ ಮಾಡಲಾಗಿದೆ. ಆದ್ದರಿಂದ ಕಡತ ಮುಕ್ತಾಯಕ್ಕೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸ್ನಾತಕಪೂರ್ವ ದೀಕ್ಷಾಂತ ಘಟಿಕೋತ್ಸವಕ್ಕೆ ಖರ್ಚಾದ ಮೊತ್ತಕ್ಕೆ ಅನುಮತಿ ನೀಡಿತು ಮತ್ತು ಕಡತ ಮುಕ್ತಾಯಕ್ಕೆ ಒಪ್ಪಿಗೆ ಸೂಚಿಸಿತು.** |
| ವಿಷಯ 19 | **ವಿಶ್ವವಿದ್ಯಾಲಯದ ಪ್ರಭಾರಿ ಕುಲಸಚಿವರನ್ನಾಗಿ ಹಿರಿಯ ಡೀನರನ್ನು ನೇಮಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ಶ್ರೀಮತಿ ಶಿಲ್ಪ. ಎಮ್ ರವರು 4 ವಾರಗಳ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿದೇಶಕ್ಕೆ ತೆರಳಿದ ಕಾರಣ ದಿನಾಂಕ: 05.01.2019ರಂದು ಕುಲಸಚಿವ ಹುದ್ದೆಯ ಪ್ರಭಾರವನ್ನು ಪ್ರೊ. ವಿ. ಗಿರೀಶ್ ಚಂದ್ರ, ಪ್ರಾಧ್ಯಾಪಕರು ಇವರಿಗೆ ವಹಿಸಲಾಗಿತ್ತು. ಪ್ರಸ್ತುತ ಶ್ರೀಮತಿ ಶಿಲ್ಪ. ಎಮ್ ರವರನ್ನು CET cellಗೆ ಸರ್ಕಾರವು ವರ್ಗಾವಣೆ ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಕುಲಪತಿಗಳು ತಮಗೆ ಪ್ರದತ್ತವಾದ ಅಧಿಕಾರವನ್ನು ಬಳಸಿ ವಿಶ್ವವಿದ್ಯಾಲಯದ ಆಡಳಿತವನ್ನು ಸುಗಮವಾಗಿ ನಡೆಸುವ ದೃಷ್ಟಿಯಿಂದ ಪ್ರಶಾಸನ ಸಭೆಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ, ಭಾಷಾ ನಿಕಾಯದ ಡೀನ್ ಆದ ಪ್ರೊ. ವಿ. ಗಿರೀಶ್ ಚಂದ್ರ, ಪ್ರಾಧ್ಯಾಪಕರು ಇವರಿಗೆ ಕುಲಸಚಿವರು (ಪ್ರಭಾರ) ಈ ಹುದ್ದೆಯಲ್ಲಿ ಮುಂದುವರಿಯುವಂತೆ ದಿನಾಂಕ: 05.02.2019 ರಂದು ಆದೇಶಿಸಿರುತ್ತಾರೆ. ಈ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸರ್ಕಾರದಿಂದ ಈ ವಿಷಯಕವಾಗಿ ಮುಂದಿನ ಆದೇಶ ಬರುವವರೆಗೂ ಪ್ರೊ. ವಿ ಗಿರೀಶ್ ಚಂದ್ರ ಇವರನ್ನೇ ಪ್ರಭಾರ ಕುಲಸಚಿವರನ್ನಾಗಿ ಮುಂದುವರೆಸಲು ಸಭೆಯು ಅನುಮತಿ ನೀಡಿತು.** |
| ವಿಷಯ 20 | **ಅಂಬೇಡ್ಕರ್ ಅಧ್ಯಯನ ಕೇಂದ್ರಕ್ಕೆ ಸಂಯೋಜನಾಧಿಕಾರಿಗಳನ್ನು ನೇಮಿಸುವ ಬಗೆಗೆ**<br>ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 08.01.2019ರಲ್ಲಿ ನಡೆದ 49ನೇ ಪ್ರಶಾಸನ ಸಮಿತಿ ಸಭೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಸ್ಥಾಪನೆಗೆ ಅನುಮತಿ ಪಡೆಯಲಾಗಿತ್ತು. ಆ ಬಗೆಗಿನ ಕಾರ್ಯ ಚಟುವಟಿಕೆಗಳನ್ನು ನಡೆಸಲು ಮತ್ತು ಸರ್ಕಾರದ ಜೊತೆ ಸಹಕಾರ ಪಡೆಯಲು ವಿಶ್ವವಿದ್ಯಾಲಯದ ಸಿಬ್ಬಂದಿಯೋರ್ವರನ್ನು ಸಂಯೋಜನಾಧಿಕಾರಿಯನ್ನಾಗಿ ನೇಮಿಸಬಹುದಾಗಿದ್ದು ಈ ವಿಷಯವನ್ನು ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **"ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ"ಕ್ಕೆ ಉಪ ನಿರ್ದೇಶಕರಾದ ಡಾ. ಸಂತೋಷ್ ಹಾನಗಲ್‌ರವರನ್ನು ಸಂಯೋಜನಾಧಿಕಾರಿಗಳನ್ನಾಗಿ ನೇಮಿಸಲು ಸಭೆಯು ತೀರ್ಮಾನಿಸಿತು.** |

ಪ್ರೊ. ವಿ. ಗಿರೀಶ್ ಚಂದ್ರ
ಕುಲಸಚಿವರು (ಪ್ರಭಾರ)

ಪ್ರೊ. ಪದ್ಮಾ ಶೇಖರ್
ಅಧ್ಯಕ್ಷರು.



Scanned by CamScanner